1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ

Spl.C.14/2023

ದಿಃ 24.11.2023
(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

Cw-9 Pw-3

| | | |
|---|---|---|
| ಹೆಸರು | ಃ | ಡಾ. ಸೈಯದ್ ನದೀಮ್ ಅಹಮದ್ |
| ತಂದೆಯ ಹೆಸರು | ಃ | ಸೈಯದ್ ಮಜೀದ್ |
| ವಯಸ್ಸು | ಃ | 47 ವರ್ಷ |
| ಉದ್ಯೋಗ | ಃ | ವೈದ್ಯಾಧಿಕಾರಿ, ಜಿಲ್ಲಾ ಸರ್ಕಾರಿ ಆಸ್ಪತ್ರೆ, ರಾಮನಗರ |
| ವಾಸಸ್ಥಳ | ಃ | ರಾಮನಗರ |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

1. ಕಳೆದ 2 ವರ್ಷ 9 ತಿಂಗಳುಗಳಿಂದ ನಾನು ರಾಮನಗರದ ಜಿಲ್ಲಾ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿ ಎಂದು ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿಃ 04.07.2022 ರಂದು ಸಾಯಂಕಾಲ ಸುಮಾರು 4.45 ಸಮಯದಒಲ್ಲಿ ನಾನು ಕರ್ತವ್ಯ ದಲ್ಲಿದ್ದಾಗ ಗಾಯಾಳು ಚಾಸಾ 1 ಇವಳು ನನ್ನಲ್ಲಿಗೆ ಚಿಕಿತ್ಸೆಗೆಂದು ಬಂದಾಗ ಅದೇ ದಿನ ಬೆಳಿಗ್ಗೆ 10 ಗಂಟೆ ಸಮಯದಲ್ಲಿ ರಾಮನಗರದ ಟ್ರೂಪ್ ಲೈನ್ ದಲ್ಲಿ ತನ್ನ ಮೇಲೆ ಹಲ್ಲೆಯಾಗಿರುತ್ತದೆ ಎಂದು ಕಾರಣ ಹೇಳಿಕೊಂಡು ಬಂದಿದ್ದರಿಂದ ಅವಳನ್ನು ವೈದ್ಯಕೀಯ ಪರೀಕ್ಷೆ ಮಾಡಿ ನೋಡಲಾಗಿ ಅವಳ ಹೊಟ್ಟೆಯ

ಮೇಲ್ಭಾಗದಲ್ಲಿ ಒಳನೋವು ಹೇಳಿದ್ದರಿಂದ ಮತ್ತು ಸದರಿಯವಳು ಗರ್ಭಿಣಿಯಾಗಿದ್ದರಿಂದ ಅವಳಿಗೆ ಬೇರೆ ಪರೀಕ್ಷೆಗೆ ಒಳಪಡಿಸಿ ಅದರಿಂದ ಬಂದವರದಿಯನ್ನು ಪರೀಕ್ಷಿಸಿ ನೋಡಲಾಗಿ ಉದರದ ಮೇಲ್ಭಾಗದಲ್ಲಿನ ಒಳನೋವು ಹೊರತುಪಡಿಸಿ ಬೇರೆ ಯಾವ ನೋವು ಆಗಿರುವುದಿಲ್ಲ ಎಂದು ಕಂಡುಬಂದಿರುತ್ತದೆ.

3.ಸದರಿ ಮೇಲೆ ಹೇಳಿದ ಒಳನೋವು ಸಾದಾ ಸ್ವರೂಪದಾಗಿದ್ದು, ಅದಕ್ಕೆ ಅನುಗುಣವಾಗಿ ಒಂದು ಗಾಯದ ಪ್ರಮಾಣಪತ್ರವನ್ನುನೀಡಿದ್ದು ಅದನ್ನು ಈಗ ನೋಡಿ ಗುರುತಿಸುತ್ತಿರುವುದರಿಂದ ಅದನ್ನು ನಿಪಿ 6 ಎಂದು ಮತ್ತು ಅದರ ಮೇಲೆ ಇರುವ ನನ್ನ ಸಹಿಯನ್ನು ಈಗ ನಿಪಿ 6 ಎ ಎಂದು ಗುರುತಿಸಲಾಯಿತು.

4. ಕೈಯಿಂದ ಹಲ್ಲೆ ನಡೆಸಿದ್ದಲ್ಲಿ ಮೇಲೆ ಹೇಳಿದ ಒಳನೋವು ಆಗುವ ಸಾಧ್ಯತೆ ಉಂಟು.

<u>ಪಾಟೀ ಸವಾಲುಃ ಶ್ರೀ.ವಿಎಸ್‌ಎಸ್., ವಕೀಲರಿಂದ ಆರೋಪಿಗಳ ಪರವಾಗಿಃ</u>

5. ಯಾವುದೇ ಒಬ್ಬ ವ್ಯಕ್ತಿಗೆ ಗ್ಯಾಸ್ಟ್ರಿಕ್ ಸಮಸ್ಯೆ ಇದ್ದಲ್ಲಿ ಮೇಲೆ ಹೇಳಿದಂತೆ ಉದರದ ನೋವು ಬರುವ ಸಾಧ್ಯತೆ ಉಂಟು ಎಂಬುವುದು ಸರಿ.

6. ಸದರಿಯವಳು ಗರ್ಭಿಣಿಯಾಗಿದ್ದರಿಂದ ವಿವಿಧ ಪರೀಕ್ಷೆಗೆ ಒಳಪಡಿಸಿ ಅದರ ವರದಿಯನ್ನು ನಾನು ನೋಡಿರುವುದಿಲ್ಲ ಎಂಬುವುದು ಸರಿಯಲ್ಲ.

7. 2. ದಿಃ 04.07.2022 ರಂದು ಸಾಯಂಕಾಲ ಸುಮಾರು 4.45 ಸಮಯದಒಲ್ಲಿ ನಾನು ಜಕರ್ತವ್ಯ ದಲ್ಲಿದ್ದಾಗ ಗಾಯಾಳು ಚಾಸಾ 1 ಇವಳು ನನ್ನಲ್ಲಿಗೆ ಚಿಕಿತ್ಸೆಗೆಂದು ಬಂದಾಗ ಅದೇ ದಿನ ಬೆಳಿಗ್ಗೆ 10 ಗಂಟೆ ಸಮಯದಲ್ಲಿ ರಾಮನಗರದ ಟ್ರೂಪ್ ಲೈನ್ ದಲ್ಲಿ ತನ್ನ ಮೇಲೆ ಹಲ್ಲೆಯಾಗಿರುತ್ತದೆ ಎಂದು ಕಾರಣ ಹೇಳಿಕೊಂಡು ಬಂದಿದ್ದರಿಂದ ಅವಳನ್ನು ವೈದ್ಯಕೀಯ ಪರೀಕ್ಷೆ ಮಾಡಿ ನೋಡಲಾಗಿ ಅವಳ ಹೊಟ್ಟೆಯ ಮೇಲ್ಭಾಗದಲ್ಲಿ ಒಳನೋವು ಹೇಳಿದ್ದರಿಂದ ಮತ್ತು ಸದರಿಯವಳು ಗರ್ಭಿಣಿಯಾಗಿದ್ದರಿಂದ ಅವಳಿಗೆ ಬೇರೆ ಪರೀಕ್ಷೆಗೆ ಒಳಪಡಿಸಿ ಅದರಿಂದ ಬಂದವರದಿಯನ್ನು ಪರೀಕ್ಷಿಸಿ ನೋಡಲಾಗಿ ಉದರದ ಮೇಲ್ಭಾಗದಲ್ಲಿನ ಒಳನೋವು ಹೊರತುಪಡಿಸಿ ಬೇರೆ ಯಾವ ನೋವು ಆಗಿರುವುದಿಲ್ಲ ಎಂದು ಕಂಡುಬಂದಿರುತ್ತದೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

8. ಸದರಿ ಮೇಲೆ ಹೇಳಿದ ಒಳನೋವು ಸಾದಾ ಸ್ವರೂಪದಾಗಿದ್ದು, ಅದಕ್ಕೆ ಅನುಗುಣವಾಗಿ ಒಂದು ಗಾಯದ ಪ್ರಮಾಣಪತ್ರವನ್ನು

ನೀಡಿರುತ್ತೇನೆ,ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

9. ಕೈಯಿಂದ ಹಲ್ಲೆ ನಡೆಸಿದ್ದಲ್ಲಿ ಮೇಲೆ ಹೇಳಿದ ಒಳನೋವು ಆಗುವ ಸಾಧ್ಯತೆ ಉಂಟು,ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

ಮರುವಿಚಾರಣೆಃ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಜಿ ಡಿ ಮಹಾವರ್ಕರ್)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.